














## ಶೆಣೈ ಹುಡುಕಾಟ

ಕರ್ನಲ್ ಶೆಣೈ ಎಂದೇ ಪ್ರಸಿದ್ಧರಾದ ಲಕ್ಷ್ಮಣ ಗಿರಿ ಶೆಣೈ ಅವರು 'ಮೈಸೂರು ಅಂಚೆ' ಇತಿಹಾಸವನ್ನು ದಾಖಲಿಸಿದ್ದು ಒಂದು ರೋಚಕಗಾಥೆ. 1970ರ ದಶಕದ ಆರಂಭದಲ್ಲಿ ಲಂಡನ್‌ನಲ್ಲಿ ಅಂಚೆ ಚೀಟಿ ಸಂಗ್ರಹಕಾರರ ಅಂತರರಾಷ್ಟ್ರೀಯ ಸಮ್ಮೇಳನವೊಂದು ನಡೆಯಿತು. ಆ ಮೇಳದಲ್ಲಿ ನಡೆದ ಹಳೆಯ ದಾಖಲೆಗಳ ಹರಾಜಿನಲ್ಲಿ, ಹಳೆಯ ಲಕೋಟೆಯೊಂದನ್ನು 2 ಸಾವಿರ ರೂಪಾಯಿಗಳ ಮೊತ್ತಕ್ಕೆ ಶೆಣೈ ಕೊಂಡರು. ಅದು 'ಮೈಸೂರು ಅಂಚೆ'ಗೆ ಸಂಬಂಧಿಸಿದ ಲಕೋಟೆ.

ಹರಾಜಿನಲ್ಲಿ ಖರೀದಿಸಿದ ಲಕೋಟೆಯಿಂದ ಆಕರ್ಷಿತರಾದ ಶೆಣೈ, ಅದರ ಇತಿಹಾಸ ಕೆದಕಲು ಹರಸಾಹಸ ಪಟ್ಟರು. ದುರದೃಷ್ಟವಶಾತ್ ದಾಖಲೆಗಳು ದುರ್ಲಭವಾಗಿದ್ದವು. ಇಡೀ ವಿಶ್ವದಲ್ಲಿ 'ಮೈಸೂರು ಅಂಚೆ'ಯ 15–20 ಲಕೋಟೆಗಳಷ್ಟೇ ಉಳಿದಿವೆ. ಅವುಗಳಲ್ಲಿ ಬಹುತೇಕ ಇಂಗ್ಲೆಂಡ್–ಹಾಲೆಂಡ್‌ಗಳಲ್ಲಿವೆ. ನಾಡಿನ ಊರುಕೇರಿಗಳಲ್ಲಿ ಹುಡುಕಾಟ ನಡೆಸಿದ ಶೆಣೈ, ಗುಡಿ–ಚರ್ಚುಗಳ ಕಡತಗಳನ್ನೂ ಶೋಧಿಸಿದರು. ಇದೆಲ್ಲದರ ಫಲವಾಗಿ ಮೈಸೂರಿಗೆ ಸಂಬಂಧಿಸಿದ ಎಲ್ಲ ಅಂಚೆ ಕಚೇರಿಗಳ ಪಟ್ಟಿ ಸಿದ್ಧಪಡಿಸುವುದು ಅವರಿಗೆ ಸಾಧ್ಯವಾಯಿತು. ಅಷ್ಟು ಮಾತ್ರವಲ್ಲ – 'ಮೈಸೂರು ಅಂಚೆ' ಪತ್ರಗಳನ್ನು ವಿತರಿಸುತ್ತಿದ್ದ ನಕ್ಷೆಯೊಂದನ್ನು ರೂಪಿಸುವುದೂ ಸಾಧ್ಯವಾಯಿತು.

ಅಂಚೆ' 1885–96ರ ಅವಧಿಯಲ್ಲಿ 412 ಕಚೇರಿಗಳನ್ನು ಹೊಂದಿತ್ತು. ಭಾರತದ ಆಡಳಿತವನ್ನು ಏಕರೂಪಗೊಳಿಸಲು ಬ್ರಿಟಿಷರು ನಿರ್ಧರಿಸಿದ್ದರಿಂದ, 1889ರ ಏಪ್ರಿಲ್ 1ರಂದು 'ಮೈಸೂರು ಅಂಚೆ' ವ್ಯವಸ್ಥೆ ಕೊನೆಗೊಂಡಿತು.

ಬಹಳ ಕಾಲದವರೆಗೆ 'ಮೈಸೂರು ಅಂಚೆ'ಯ ಇತಿಹಾಸ ಅಸ್ಪಷ್ಟವಾಗಿಯೇ ಇತ್ತು. ಅಂತರರಾಷ್ಟ್ರೀಯ ಅಂಚೆ ಇತಿಹಾಸಕಾರ ಕರ್ನಲ್ ಶೆಣೈ ಅವರ ಸಂಶೋಧನೆಯ ಮೂಲಕ ನಾಡಿನ ಹೆಮ್ಮೆಯ ವಿಶಿಷ್ಟ ಅಂಚೆ ಇತಿಹಾಸ ದಾಖಲಾಗುವಂತಾಯಿತು.

### ಆಧುನಿಕತೆಯ ರಸ್ತೆ

ಹೀಗೆ ಅಂಚೆ ಲೋಕದಲ್ಲಿ ಮೈಸೂರು ತನ್ನದೇ ಆದ ಛಾಪು ಮೂಡಿಸಿದ್ದರೆ, ಇನ್ನೊಂದೆಡೆ ಮೈಸೂರಿನ ಸಾಂಸ್ಕೃತಿಕ ಚಹರೆಗಳು ಆಧುನಿಕ ವ್ಯವಸ್ಥೆಯ ಅಂಚೆಚೀಟಿಗಳಲ್ಲಿ ಹಾಗೂ ಲಕೋಟೆಗಳಲ್ಲಿ ಸ್ಥಾನ ಪಡೆದುಕೊಂಡಿವೆ. ವಿಶ್ವಪ್ರಸಿದ್ಧ ದಸರೆಯ ಆನೆ ಅಂಬಾರಿ (ಜಂಬೂಸವಾರಿ) ಅಂಚೆಚೀಟಿಗಳಲ್ಲಿ ಕಾಣಿಸಿಕೊಂಡಿದೆ. ಈ ಮೂಲಕ ದಸರೆಗೆ 'ಅಂಚೆಯ ಮೊಹರು' ಬಿದ್ದಂತಾಗಿದೆ. ಮೈಸೂರು ಮಲ್ಲಿಗೆ ಹೂವು ಕೂಡ ಸ್ಟ್ಯಾಂಪ್ ಗೌರವಕ್ಕೆ ಒಳಗಾಗಿದೆ.

ಸಾರಸ್ವತಲೋಕದ ವಿಷಯಕ್ಕೆ ಬಂದರೆ – ಮೈಸೂರಿನ ಸಾಂಸ್ಕೃತಿಕಸ್ಮೃತಿಗಳಾಗಿರುವ ಕುವೆಂಪು, ಆರ್.ಕೆ. ನಾರಾಯಣ್ ಅವರಿಗೂ ಅಂಚೆಚೀಟಿಯ ಗೌರವ ಸಂದಿದೆ.

ಮೈಸೂರಿನ ಸುತ್ತಮುತ್ತಲಿನ ವನ್ಯಲೋಕವೂ ಅಂಚೆಚೀಟಿಗಳಲ್ಲಿ ಸ್ಥಾನಪಡೆದಿವೆ. ಇನ್ನು ಮೈಸೂರಿನ ವಿಶೇಷಗಳು ಅಂಚೆ ಲಕೋಟೆಗಳಲ್ಲಿ ಸ್ಥಾನಪಡೆದಿವೆ. ಅರಮನೆಗಳು, ಮೈಸೂರು ಚಿತ್ರಶೈಲಿ, ದಸರೆಯ ಆಕರ್ಷಣೆಗಳಲ್ಲಿ ಒಂದಾದ ಪಂಜಿನ ಕವಾಯಿತು, ಸೈನಿಕ ಪಡೆ, ದಸರಾ ವಸ್ತುಪ್ರದರ್ಶನ, ಜಂಬೂಸವಾರಿ ಆನೆಗಳು – ಇವೆಲ್ಲವೂ ಅಂಚೆಲಕೋಟೆಗಳಲ್ಲಿ ಕಾಣಿಸಿಕೊಂಡಿವೆ. ಇತ್ತೀಚೆಗೆ ಕಾಪಿರೈಟ್ ವದಂತಿಯ ಮೂಲಕ ಸುದ್ದಿಯಲ್ಲಿದ್ದ 'ಮೈಸೂರು ಪಾಕ್' ಸಿಹಿತಿನಿಸು ಕೂಡ ವಿಶೇಷ ಅಂಚೆ ದಸ್ತಾವೇಜುಗಳಲ್ಲಿ ಅನಾವರಣಗೊಂಡಿದೆ.

ಕಣ್ಣನ ಸೆಳೆಯುವ ದೀಪಗಳಿಂದ ಕಂಗೊಳಿಸುವ ಅರಮನೆ, ಜಂಬೂಸವಾರಿ, ಮೈಸೂರಿನ ಶ್ರೀಗಂಧದ ವಸ್ತುಗಳು, ಅಂಚೆ ತರಬೇತಿ ಕೇಂದ್ರ, ಮೈಸೂರು ಹುದುಗು ಕಲೆ – ಇವೆಲ್ಲವೂ ಆಕರ್ಷಕ ರಸ್ತೆಗಳಾಗಿ ಅಂಚೆ ದಸ್ತಾವೇಜುಗಳಲ್ಲಿವೆ.